# ಮೂರರ ಮಗ್ಗಿ

ಮಲ್ಲಿಕಾರ್ಜುನ ಸುರಧೇನುಪುರ
ಕಲೆ: ಸಂತೋಷ್ ಸಸಿಹಿತ್ಲು



ಮೂರರ ಮಗ್ಗಿಯ ಗಮ್ಮತ್ತು
ಹೇಳುವೆ ನಿಮಗೆ ಇವತ್ತು

ಮೂರಂದ್ಲ ಮೂರು
ಕಾಲಗಳು ಮೂರು

ಮೂರೆರಡ್ಲ ಆರು
ಋತುಗಳು ಆರು

ಮೂರ್ ಮೂರ್ಲ ಒಂಬತ್ತು
ಗ್ರಹಗಳು ಒಂಬತ್ತು

ಮೂರ್ನಾಲ್ಕಲ ಹನ್ನೆರಡು
ವರ್ಷಕೆ ಮಾಸಗಳು ಹನ್ನೆರಡು

ಮೂರೈದ್ಲ ಹದಿನೈದು
ಪಕ್ಷಕೆ ದಿನಗಳು ಹದಿನೈದು

ಮೂರಾರ್ಲ ಹದಿನೆಂಟು
ವೋಟಿನ ವಯಸ್ಸು ಹದಿನೆಂಟು

ಮೂರೇಳ್ಲ ಇಪ್ಪತ್ತೊಂದು
ಮದುವೆ ವಯಸ್ಸು
ಗಂಡಿಗೆ ಇಪ್ಪತ್ತೊಂದು

ಮೂರೆಂಟ್ಲ ಇಪ್ಪತ್ನಾಲ್ಕು
ದಿನಕೆ ಗಂಟೆಗಳು ಇಪ್ಪತ್ನಾಲ್ಕು

ಮೂರೊಂಬತ್ಲ ಇಪ್ಪತ್ತೇಳು
ಮಳೆಯ ನಕ್ಷತ್ರಗಳು ಇಪ್ಪತ್ತೇಳು

ಮೂರತ್ಲ ಮೂವತ್ತು
ಮಾಸದ ದಿನಗಳು ಮೂವತ್ತು

ಮೂರರ ಮಗ್ಗಿಯ ಗಮ್ಮತ್ತು
ತಿಳಿಯಿತೆ ನಿಮಗೆ ಇವತ್ತು

## ಕುಂಚ ಪ್ರಪಂಚ







**ಸಂವಿತ್ ಕೃಷ್ಣ ಬಿ.ಎಸ್.**
3ನೇ ತರಗತಿ, ಎನ್‌ಪಿಎಸ್ ಸ್ಕೂಲ್, ಬೆಂಗಳೂರು



**ಅರುಂಧತಿ ಎ.**
5ನೇ ತರಗತಿ, ಹೊಸದುರ್ಗ